1	2	3	4	5	6	7
3.	ಬಸನಾಳ	1875	ನಲ್ಲಿನೀರು ಸರಬರಾಜು ಯೋಜನೆ	39.40		ಬಸನಾಳ ಗ್ರಾಮದಲ್ಲಿ ನೀರು ಪೂರೈಕೆ ಯೋಜನೆಯ ಮೇಲ್ಮಟ್ಟ ಜಲಸಂಗ್ರಹಾಲಯವನ್ನು ದುರಸ್ತಿಪಡಿಸುವ ಕೆಲಸ ಪ್ರಗತಿಯಲ್ಲಿ ಇದೆ. ಈ ತಿಂಗಳ ಕೊನೆಗೆ ಪೂರ್ಣಗೊಳಿಸಲಾಗುವುದು.
4.	ಲೋಕಾಪುರ	7787	ನಲ್ಲಿನೀರು ಸರಬರಾಜು ಯೋಜನೆ	27.11		ಲೋಕಾಪುರ ಗ್ರಾಮದ ಯೋಜನೆಗೆ ಪುನಶ್ಚೇತನಗೊಳಿಸಲು ಮತ್ತು ಕಿರುನೀರು ಸರಬರಾಜು ಯೋಜನೆ ನಿರ್ಮಿಸುವ ಕೆಲಸಗಳನ್ನು 1996-97ನೇ ಸಾಲಿನ ಕರಡು ಯೋಜನೆಯಲ್ಲಿ ಅಳವಡಿಸಲಾಗಿದೆ
5.	ಕನಸಗೇರಿ	502	ಕಿರುನೀರು ಸರಬರಾಜು ಯೋಜನೆ	14.78		ಕನಸಗೇರಿ ಗ್ರಾಮಕ್ಕೆ ಕಿರುನೀರು ಪೂರೈಕೆ ಯೋಜನೆ ಮಂಜೂರು ಆಗಿದ್ದು, ಸಿವಿಲ್ ಕೆಲಸ ಪ್ರಗತಿಯಲ್ಲಿ ಇದೆ. ಜಲಮೂಲ ಲಭ್ಯವಾದ ತಕ್ಷಣ ಯೋಜನೆಯನ್ನು ಪ್ರಾರಂಭಿಸಲಾಗುವುದು.

ವಿಷಯ:- ಜೀರಗಾಳ ಗ್ರಾಮಕ್ಕೆ ಕುಡಿಯುವ ನೀರಿನ್ನೊದಗಿಸುವುದು.

1315 (2164) ಶ್ರೀ ಜಿ.ಎಂ. ಕಾರಜೋಳ (ಮುಧೋಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಧೋಳ್ ತಾಲ್ಲೂಕಿನ ಜೀರಗಾಳ ಗ್ರಾಮಸ್ಥರು ಕಳೆದ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಜೀರಗಾಳ್ ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಕೈಗೆತ್ತಿಕೊಂಡ ಕ್ರಮಗಳೇನು?

ಇ) ಎಷ್ಟು ದಿನಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ಹೌದು.

ಆ) ಜೀರಗಾಳ್ ಗ್ರಾಮವನ್ನು ನೆದರ್‌ಲ್ಯಾಂಡ್ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲ್ಯ ಯೋಜನೆಯಡಿ ಅಳವಡಿಸಲಾಗಿದೆ. ಅಲ್ಲಿಯವರೆವಿಗೆ 1996-97ನೇ ಸಾಲಿಗೆ ಕಿರುನೀರು

ಯೋಜನೆ ಪುನಶ್ಚೇತನ ಯೋಜನೆಯಡಿ ಪ್ರಸ್ತುತ ವ್ಯವಸ್ಥೆಯನ್ನು ಉತ್ತಮಪಡಿಸಲಾಗುವುದು. ತಾತ್ಕಾಲಿಕವಾಗಿ ಚಿಂಚಖಂಡಿ ಗ್ರಾಮದ ಬಳಿ ಕೊಳವೆಬಾವಿ ಕೊರೆದು ಸುಮಾರು 6 ಕಿ.ಮೀ. ಕೊಳವೆಗಳನ್ನು ಹಾಕಿ ಕುಡಿಯುವ ನೀರು ಪೂರೈಸಲಾಗುತ್ತದೆ.

ಇ) 1996-97ನೇ ಸಾಲಿನಲ್ಲಿ ಮಂಜೂರಾದ ಕಿರುನೀರು ಪೂರೈಕೆ ಪುನಃಶ್ಚೇತನ ಯೋಜನೆಯನ್ನು ಮಾರ್ಚ್ 1997ರೊಳಗಾಗಿ ಪೂರ್ಣಗೊಳಿಸಲಾಗುವುದು. ನೆದರ್‌ಲ್ಯಾಂಡ್ ಯೋಜನೆಯಡಿ ಜೀರಗಾಳ್ ಗ್ರಾಮದ ಕುಡಿಯುವ ನೀರಿನ ಕಾಮಗಾರಿಯನ್ನು ಡಿಸೆಂಬರ್ 96ರೊಳಗಾಗಿ ಪ್ರಾರಂಭಿಸಿ, ಮಾರ್ಚ್ 98ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿಷಯ:- ದಶಲಕ್ಷ ಬಾವಿ ಯೋಜನೆ

1316 (2328) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮೀಣ):-** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದಶಲಕ್ಷ ಬಾವಿ ಯೋಜನೆ ಜಾರಿಯಲ್ಲಿದೆಯೇ, 1996-97ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ? ಈ ಯೋಜನೆಯ ಗುರಿ ಹಾಗೂ ಪ್ರಗತಿ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ರಾಜ್ಯದಲ್ಲಿ ದಶಲಕ್ಷ ಬಾವಿ ಯೋಜನೆ ಜಾರಿಯಲ್ಲಿದೆ. ರಾಜ್ಯದಲ್ಲಿ ಈ ಯೋಜನೆಯಡಿ ತಾತ್ಕಾಲಿಕವಾಗಿ ರೂ. 2915.54 ಲಕ್ಷ ಹಣ ನಿಗದಿಪಡಿಸಲಾಗಿದೆ. ಈ ಯೋಜನೆಯ ತಾತ್ಕಾಲಿಕ 96-97ನೇ ವಾರ್ಷಿಕ ಗುರಿ ರೂ. 2915.54 ಲಕ್ಷಗಳಲ್ಲಿ ಜಿಲ್ಲಾ ಪಂಚಾಯತ್‌ಗಳು ಜೂನ್ 96ರ ಅಂತ್ಯದವರೆಗೆ ರೂ. 245.639 ಲಕ್ಷಗಳಷ್ಟು ಖರ್ಚು ಮಾಡಲಾಗಿದೆ.

ವಿಷಯ:- ನೆಮ್ಮದಿ ಯೋಜನೆಗೆ ಒದಗಿಸಿರುವ ಹಣ.

1317 (2330) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮೀಣ):-** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 'ನೆಮ್ಮದಿ' ಯೋಜನೆಯ ಮುಖ್ಯಾಂಶಗಳೇನು ಹಾಗೂ ಗುರಿಗಳೇನು?

ಆ) ರಾಜ್ಯದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ, ಈ ಯೋಜನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ ಆಗಿರುವ ಸಾಧನೆ ಎಷ್ಟು? (ವಿವರಗಳನ್ನು ಒದಗಿಸುವುದು).

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ನೆಮ್ಮದಿ ಕಾರ್ಯಕ್ರಮವನ್ನು ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಬಳಪಡಿಸದಿರುವ ರಾಜ್ಯದ 42 ತಾಲ್ಲೂಕುಗಳಲ್ಲಿ ಕೃಷಿ ಕಾಮಗಾರಿಗಳ ಕೆಲಸ ಕಡಿಮೆ ಇರುವ ಕಾಲದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗವನ್ನು ಒದಗಿಸುವುದೇ ಈ ಯೋಜನೆಯ ಮುಖ್ಯ ಅಂಶ.